ಕರ್ನಾಟಕ ಸರ್ಕಾರ
Government of karnataka

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in

ಡಿಎಸ್ಇಆರ್‌ಟಿ
DSERT

Phone - 080 26980100
Fax - 080 26422377

ಸಂಖ್ಯೆ :OB-05/ಕ.ಗು.ಚೀ/10/2020-21 ದಿನಾಂಕ:29/12/2020

## ದರಪಟ್ಟಿ ಆಹ್ವಾನಿಸಿ ಪ್ರಕಟಣೆ

ವಿಷಯ : ಈ ಕಛೇರಿಯಲ್ಲಿರುವ ಎಲ್ಲಾ ಅಧಿಕಾರಿ/ಸಿಬ್ಬಂದಿಗಳಿಗೆ ಗುರುತಿನ ಚೀಟಿ ಮತ್ತು ನಾಮಫಲಕಗಳನ್ನು ಮಾಡಿಸುವ ಬಗ್ಗೆ.

=***=

ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 87 ಕತವ 2020 ಬೆಂಗಳೂರು, ದಿನಾಂಕ:03/11/2020ರನ್ವಯ ಡಿ.ಎಸ್.ಇ.ಆರ್.ಟಿ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ/ಸಿಬ್ಬಂದಿಗಳು ಕರ್ತವ್ಯದ ಅವಧಿಯಲ್ಲಿ ಕಡ್ಡಾಯವಾಗಿ ಇಲಾಖೆಯಿಂದ ಪಡೆದ ಗುರುತಿನ ಚೀಟಿಯನ್ನು ಕೊರಳಿಗೆ ಧರಿಸುವುದು ಹಾಗೂ ನಾಮಫಲಕಗಳನ್ನು ಕಾರ್ಯ ನಿರ್ವಹಿಸುವ ಮೇಜಿನ ಮೇಲೆ ಕಡ್ಡಾಯವಾಗಿ ಅಳವಡಿಸುವುದಾಗಿ ಸೂಚಿಸಿದ್ದು ಸದರಿ ಕಛೇರಿಯಲ್ಲಿನ ಎಲ್ಲಾ ಅಧಿಕಾರಿ/ಸಿಬ್ಬಂದಿಗಳಿಗೆ ಗುರುತಿನ ಚೀಟಿಯ ಕೊರಳು ಪಟ್ಟಿಗಳು (Tags) ಹಾಗೂ ನಾಮಫಲಕಗಳನ್ನು ಮಾಡಿಸಲು ದರ-ಪಟ್ಟಿ (ಕೊಟೇಶನ್)ಯನ್ನು ಕರೆಯಲಾಗಿದೆ.

| ಕ್ರ. ಸಂ | ವಿವರಗಳು | |
|---|---|---|
| 1. | Tags | Tags should be printed on both side in English and kannada (DSERT & Govt of Karnataka )respectively ,each tags must have hook |
| 2. | Name board | Name board should have both(Name & designation) in kannada |

ನಿಬಂಧನೆಗಳು:

1) ಕೋಟೇಶನ್ ಗಳು ಕೆಟಿಪಿಪಿ ನಿಯಮಗಳಿಗೆ ಒಳಪಟ್ಟಂತೆ ಇರತಕ್ಕದ್ದು. ಸರಬರಾಜಿಗೆ ಯಾವುದೇ ಮುಂಗಡ ನೀಡಲಾಗುವುದಿಲ್ಲ.
2) ಸರಬರಾಜುದಾರ ಸಂಸ್ಥೆಯು ಎಲ್ಲಾ ಶಾಸನಬದ್ಧ ನೋಂದಣಿಗಳನ್ನು ಹೊಂದಿರತಕ್ಕದ್ದು.
3) ದರಗಳನ್ನು ನಮೂದಿಸುವಾಗ ತಲಾ ಒಂದು ಗುರುತಿನ ಚೀಟಿಯ ಕೊರಳು ಪಟ್ಟಿಗಳು (Tags) ಹಾಗೂ ನಾಮಫಲಕಗಳಿಗೆ ತಗುಲುವ ದರಗಳನ್ನು ನಮೂದಿಸತಕ್ಕದ್ದು.
4) ದರಪಟ್ಟಿಯು ಎಲ್ಲಾ ರೀತಿಯ ತೆರಿಗೆಗಳನ್ನೊಳಗೊಂಡಂತೆ ಇರತಕ್ಕದ್ದು.
5) ಬಿಲ್ಲು ಪಾವತಿಯು ನಿಯಮಾನುಸಾರ ಕೆ-2 ಮೂಲಕ e-payment ನಂತೆ ಆಗಲಿದೆ.

ಆಸಕ್ತರು ಈ ಕಛೇರಿಗೆ ಬಂದು ಪರಿಶೀಲಿಸಿ ಸೂಚನಾ ಫಲಕದಲ್ಲಿ ಪ್ರಕಟವಾದ 7 ದಿವಸಗಳೊಳಗಾಗಿ ಡಿ.ಎಸ್.ಇ.ಆರ್.ಟಿ ನಿರ್ದೇಶನಾಲಯ, ಸಾ.ಶಿ.ಇಲಾಖೆ, #4. 100ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು-560085. ಇಲ್ಲಿಗೆ ತಲುಪುವಂತೆ ಮೊಹರು ಮಾಡಿದ ಲಕೋಟೆಯಲ್ಲಿ ದರಪಟ್ಟಿಯನ್ನು ಸಲ್ಲಿಸತಕ್ಕದ್ದು. ಸ್ವೀಕೃತಿ ವಿಳಂಬಕ್ಕೆ ಈ ಸಂಸ್ಥೆಯು ಜವಾಬ್ದಾರಿಯಲ್ಲ.

ನಿರ್ದೇಶಕರು,
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು
ತರಬೇತಿ ಇಲಾಖೆ
29/12